ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

20

ಇಲಾಖೆ / ವಿಷಯ : DEPARTMENT / SUBJECT: ಮಹದಾಯಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 19/3/21

## ಮಹದಾಯಿ: ಇಂದು ಕಣಕುಂಬಿಗೆ ತ್ರಿಸದಸ್ಯ ಜಂಟಿ ಸಮಿತಿ ಭೇಟಿ

ಕ. ಪ್ರ 19/3/21

**ಬೆಳಗಾವಿ:** ಮಹದಾಯಿ ನದಿ ವ್ಯಾಪ್ತಿಯ ಕಳಸಾ-ಬಂಡೂರಿ ಯೋಜನಾ
ಪ್ರದೇಶವಾದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಕಣಕುಂಬಿಗೆ ಶುಕ್ರವಾರ
ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯಗಳ ಜಂಟಿ ಪರಿಶೀಲನಾ
ತ್ರಿಸದಸ್ಯ ಸಮಿತಿ ಭೇಟಿ ನೀಡಲಿದೆ. ಕರ್ನಾಟಕವು ಈಗಾಗಲೇ ಕಳಸಾ ನೀರು
ತಿರುಗಿಸಿಕೊಂಡಿದೆ ಎಂಬ ಗೋವಾ ಆರೋಪಿಸಿರುವ ಹಿನ್ನೆಲೆಯಲ್ಲಿ ಜಂಟಿ
ಸಮಿತಿಯ ಪರಿಶೀಲನೆಗೆ ಸುಪ್ರೀಂ ಫೆಬ್ರವರಿಯಲ್ಲಿ ಆದೇಶ ನೀಡಿತ್ತು. ಕರ್ನಾ
ಟಕದಿಂದ ನವಿಲುತೀರ್ಥ ಅಣೆಕಟ್ಟಿನ ಅಧೀಕ್ಷಕ ಅಭಿಯಂತ ಕೃಷ್ಣೋಜಿರಾವ್,
ಗೋವಾದಿಂದ ಪ್ರಸಾದ ಹಾಗೂ ಮಹಾರಾಷ್ಟ್ರದಿಂದ ಥೋರಟ್ ಅವರು ಈ
ಸಮಿತಿಯಲ್ಲಿದ್ದಾರೆ. ಸಮಿತಿ ಸದಸ್ಯರ ಭೇಟಿ ಹಿನ್ನೆಲೆಯಲ್ಲಿ ಯೋಜನಾ ಪ್ರದೇಶಕ್ಕೆ
ಯಾರೂ ಪ್ರವೇಶಿಸದಂತೆ ಭಾರೀ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ. ನಾಲ್ಕು
ವಾರಗಳಲ್ಲಿ ವರದಿ ನೀಡುವಂತೆ ನ್ಯಾಯಾಲಯವು ಸೂಚಿಸಿದ್ದು, ಪ್ರಕರಣಕ್ಕೆ
ಸಂಬಂಧಿಸಿ ಏಪ್ರಿಲ್ ಮೊದಲ ವಾರ ವಿಚಾರಣೆ ನಡೆಯುವ ಸಾಧ್ಯತೆ ಇದೆ.